**Series BRH**

**Code No. 13**

Roll No. | | | | | | | |

Candidates must write the Code on the title page of the answer-book.

- Please check that this question paper contains **11** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **8** questions.
- **Please write down the Serial Number of the question before attempting it.**
- 15 minutes time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# SUMMATIVE ASSESSMENT – II

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*

***ಸೂಚನೆಗಳು :*** *ಈ ಪ್ರಶ್ನೆ ಪತ್ರಿಕೆಯು A, B, C ಮತ್ತು D ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.*

ವಿಭಾಗ A – (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

ವಿಭಾಗ B – (ಬರವಣಿಗೆ ಕೌಶಲ) : 14 ಅಂಕಗಳು

ವಿಭಾಗ C – (ಅನ್ವಯಿಕ ವ್ಯಾಕರಣ) : 14 ಅಂಕಗಳು

ವಿಭಾಗ D – (ಪಠ್ಯಗಳ ಅಧ್ಯಯನ) : 40 ಅಂಕಗಳು

## ವಿಭಾಗ A

### (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

I. 1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

ಒಳ್ಳೆಯ ಪುಸ್ತಕಗಳು ಶಿಕ್ಷಕರಿಗಿಂತ ಉತ್ತಮ ಮಾರ್ಗದರ್ಶನವನ್ನು ನೀಡಬಲ್ಲವು ಎಂದು ತಜ್ಞರೊಬ್ಬರು ಅಭಿಪ್ರಾಯ ಪಡುತ್ತಾರೆ. ಪುಸ್ತಕಗಳನ್ನು ಓದುವುದರಿಂದ ಅನುಭವ ಹೆಚ್ಚುತ್ತದೆ, ವ್ಯಕ್ತಿತ್ವ ಪರಿಪಕ್ವಗೊಳ್ಳುತ್ತದೆ.

ಹೇಗೆ ಓದಬೇಕು ಎಂಬುದರ ಬಗ್ಗೆ ಈಗಾಗಲೇ ಸಾಕಷ್ಟು ಸಂಶೋಧನೆಗಳು ನಡೆದಿವೆ. ಮನೋವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞರ ಪ್ರಕಾರ ಓದಲು ದೃಢವಾದ ಸಂಕಲ್ಪವಿರಬೇಕು. ಕಲಿಯಬೇಕೆನ್ನುವ ಹಂಬಲ ಮತ್ತು ಕಲಿಯುವೆ ಎಂಬ ಆತ್ಮವಿಶ್ವಾಸ ಹುಟ್ಟದಿದ್ದರೆ ಓದಿನಲ್ಲಿ ಅಭಿರುಚಿ ಹುಟ್ಟುವುದಿಲ್ಲ. 'ಎಷ್ಟು ಓದಿದರೂ ನೆನಪಲ್ಲೇ ಉಳಿಯುವುದಿಲ್ಲ' ಎಂದು ಹಳಿಯುತ್ತ ಪುಸ್ತಕವನ್ನು ದೂರ ಎಸೆಯುವ ಬದಲಾಗಿ ಮತ್ತೆ ಮತ್ತೆ ಓದಿ ಸ್ಮರಣಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳಲು ಪ್ರಯತ್ನಿಸಬೇಕು.

ಓದಿನ ಮುಖ್ಯ ಉದ್ದೇಶ ಅರ್ಥಮಾಡಿಕೊಳ್ಳುವುದು. ಪರೀಕ್ಷೆಯಲ್ಲಿ ಪಾಸಾಗುವ ಉದ್ದೇಶದಿಂದ ಕಾಟಾಚಾರಕ್ಕೆ ಓದಿದ ಯಾವ ಅಂಶವೂ ನಿಮ್ಮ ಮನಸ್ಸಿನಲ್ಲಿ ಉಳಿಯದು. ಈ ಅರ್ಥವ್ಯಾಪ್ತಿಯಲ್ಲಿ ಓದು ಅಧ್ಯಯನದ ಮಟ್ಟಕ್ಕೇರುವುದು. ನಿಮ್ಮ ಅಧ್ಯಯನ ಅಥವಾ ಓದು ಸಫಲವಾಗಿದೆಯೇ ಎಂಬುದನ್ನು ನೀವೇ ಪರೀಕ್ಷಿಸಿಕೊಳ್ಳಬಹುದು. ಓದಿದ ತರುವಾಯ ಪುಸ್ತಕವನ್ನು ಮುಚ್ಚಿಟ್ಟು ಓದಿದ್ದನ್ನು ಮತ್ತೆ ನೆನಪು ಮಾಡಿಕೊಳ್ಳಬೇಕು. ಮುಖ್ಯ ಅಂಶಗಳನ್ನು ಮತ್ತೆ ಗುರುತುಹಾಕಿಕೊಳ್ಳುತ್ತಾ ಹೋಗಬೇಕು. "ಕೇವಲ ಓದಿದರೆ ಪ್ರಯೋಜನವಿಲ್ಲ, ಓದಿದ್ದನ್ನು ಮನನ ಮಾಡಿಕೊಂಡರೆ ಮಾತ್ರ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನವಾಗುತ್ತದೆ" ಎಂದು ತಜ್ಞರು ಸಲಹೆ ನೀಡಿದ್ದಾರೆ.

ಪ್ರಶ್ನೆಗಳು :

(ಅ) ಅಧ್ಯಯನವೆಂದರೇನು ? *1*

(ಆ) ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಏನು ಮಾಡಬೇಕು ? *1*

(ಇ) ನಮ್ಮ ಓದಿನ ಸಫಲತೆಯನ್ನು ಪರೀಕ್ಷಿಸುವುದು ಹೇಗೆ ? *2*

(ಈ) ವಿದ್ಯಾರ್ಥಿಗಳಿಗೆ ತಜ್ಞರ ಸಲಹೆ ಏನು ? *2*

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :

ನಾ ಮೇಲಿನವನು ಬಲು ದೊಡ್ಡವನು ಎಂದು
ಮೆರೆದಾಡಬೇಡ ಗೆಳೆಯ
ನಿನಗಿಂತ ಮಿಗಿಲವರು ಇದ್ದಾರು ಬುವಿಯಲ್ಲಿ
ಸುಳ್ಳು ಭ್ರಮೆಯಲಿ ನೀ ಮುಳುಗಬೇಡ.

ಬಲು ದೊಡ್ಡ ಚಂದಿರನು ಇರುಳೆಲ್ಲ ಬೆಳಗುವನು
ಮರೆಯಾಗುವನು ಹಗಲ ಕಿರಣದಲ್ಲಿ
ಉರಿಯುವನು ಸೂರ್ಯ ಅವಗಿಂತ ಹಿರಿಯ
ಕಳೆದು ಹೋಗುವನು ಇರುಳ ಸೆರಗಿನಲ್ಲಿ.

ಮಣ್ಣು - ಮೊಳಕೆಯ ಹುಟ್ಟು
ಬೀಜ - ವೃಕ್ಷದ ಗುಟ್ಟು
ಬೆರಗುಗೊಳಿಸುವುದಿಲ್ಲವೇನು ?
ಗಿರಿಝರಿಯ ಒರತೆ
ಜೀವರಾಶಿಯ ಚರಿತೆ
ರೋಮಾಂಚನಗೊಳಿಸದೇನು ?

ಜನನ ಮರಣದ ಒಗಟ
ಬಿಚ್ಚಿ ಹೇಳುವೆಯೇನು
ಲೋಕದೊಳಿತಿಗೆ ನಿನ್ನ ಕಾಣ್ಕೆ ಏನು ?
ಹೇಳು ಗೆಳೆಯನೆ ಈಗ
ಎದೆ ತಟ್ಟಿ ನೀ ಹೇಳು
ಪ್ರಕೃತಿಯ ಹಿರಿತನಕೆ ನೀ ಸಾಟಿ ಏನು ?

*- ಬಿ.ಬಿ. ಲಲಿತಾ ನಾಯಕ್*

**ಪ್ರಶ್ನೆಗಳು :**

(ಅ) ನಾವು ಹೇಗೆ ಮೆರೆದಾಡಬಾರದು ? *1*

(ಆ) ಒಗಟಾಗಿ ಉಳಿದಿರುವುದು ಏನು ? *1*

(ಇ) ನಮ್ಮನ್ನು ಬೆರಗುಗೊಳಿಸುವ ಸಂಗತಿಗಳು ಯಾವುವು ? *2*

(ಈ) ಯಾವುವು ನಮ್ಮನ್ನು ರೋಮಾಂಚನಗೊಳಿಸುತ್ತವೆ ? *2*

## ವಿಭಾಗ B

### (ಬರವಣಿಗೆ ಕೌಶಲ) : 14 ಅಂಕಗಳು

**II.** ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ : *6*

(ಅ) ವನ್ಯ ಜೀವಿಗಳು ಹಾಗೂ ಅವುಗಳ ಮಹತ್ವ

(ಆ) ಭ್ರಷ್ಟಾಚಾರ ದೇಶದ ಅಭಿವೃದ್ಧಿಗೆ ಮಾರಕ

(ಇ) ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಮಹತ್ವ

**III.** ನಿಮ್ಮ ಹಳ್ಳಿಯಲ್ಲಿ ಆರೋಗ್ಯಕೇಂದ್ರವನ್ನು ಸ್ಥಾಪಿಸುವಂತೆ ಕೋರಿ ಆರೋಗ್ಯ ಸಚಿವರಿಗೆ ಪತ್ರವನ್ನು ಬರೆಯಿರಿ. *4*

ಅಥವಾ

ನಿಮ್ಮ ಪ್ರದೇಶದಲ್ಲಿ ಅನಿಶ್ಚಿತ ವಿದ್ಯುತ್ ಕಡಿತದಿಂದಾಗಿ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆಯನ್ನು ವಿವರಿಸಿ, ಅದನ್ನು ನಿವಾರಿಸುವಂತೆ ಕೋರಿ ಆಯುಕ್ತರು, ಬೆಸ್ಕಾಂ, ಜಯನಗರ, ಬೆಂಗಳೂರು - ಇವರಿಗೆ ಪತ್ರವನ್ನು ಬರೆಯಿರಿ.

**IV.** ನಿಮ್ಮ ಊರಿನಲ್ಲಿ ಅತೀ ಮಳೆಯಿಂದಾದ ಪರಿಸ್ಥಿತಿಯ ಬಗ್ಗೆ ವರದಿಯನ್ನು ತಯಾರಿಸಿ. *4*



www.careeri

## ವಿಭಾಗ C

### (ಅನ್ವಯಿಕ ವ್ಯಾಕರಣ) : 14 ಅಂಕಗಳು

**V.** ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ : *2*

   (i) ಹಗಲುಗನಸು

   (ii) ಹತ್ತಾರು

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : *2*

   (i) ಭವಸಮುದ್ರ

   (ii) ಫಲಪುಷ್ಪಗಳು

3. ಈ ನುಡಿಗಟ್ಟು / ಪಡೆನುಡಿಯನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ :

   'ಕಟ್ಟುಕತೆ' *1*

4. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : *1*

   (i) ವಿವೇಕ

   (ii) ಸ್ಪರ್ಧಿ

5. ಈ ಪದಗಳಿಗೆ ತತ್ಸಮ / ತದ್ಭವ ರೂಪವನ್ನು ಬರೆಯಿರಿ : *1*

   (i) ಯಮ

   (ii) ಅಡವಿ

6. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : *1*

   (i) ಉರಗ

   (ii) ಪಲ್ಲವ

7. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ : *1*

(i) ಹೋಗುತ್ತಾನೆ - ವರ್ತಮಾನಕಾಲ : : ಹೋಗುವನು -

(ii) ಬರೆಯಲಿ - ವಿಧ್ಯರ್ಥಕ : : ಬರೆಯೆನು -

8. ಈ ಪದಗಳ ವಿಭಕ್ತಿಯನ್ನು ಹೆಸರಿಸಿ : *1*

(i) ಮೃಗಾಧಿರಾಜಂ

(ii) ಸಾಮಜವೆಲ್ಲವಂ

9. ಕೆಳಗಿನ ಪದಗಳಲ್ಲಿ ಕರ್ಮಪದವನ್ನು ಗುರುತಿಸಿ : *1*

(i) ಮೊಲವು

(ii) ಹಣ್ಣನ್ನು

(iii) ನಿಧಾನವಾಗಿ

(iv) ತಿಂದಿತು

10. ಕೆಳಗಿನ ಪದಗಳಲ್ಲಿ ಇದು ಅಂಕಿತ ನಾಮ : *1*

(i) ಕೂಸು ಕುಲಾವಿ

(ii) ರಾಮ ಲಕ್ಷ್ಮಣರು

(iii) ತುಟ್ಟ ತುದಿ

(iv) ಕಿರಿ ಕಿರಿ

11. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿವರಿಸಿ : *2*

(i) ‘ಶಕ್ತಿಯೇ ಜೀವನ ದುರ್ಬಲತೆಯೇ ಮರಣ’

(ii) ‘ಆಳಾಗಿ ದುಡಿ, ಅರಸಾಗಿ ಉಣ್ಣು’

## ವಿಭಾಗ D

## (ಪಠ್ಯಗಳ ಅಧ್ಯಯನ) : 40 ಅಂಕಗಳು

**VI.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *1×14=14*

1. ಇಂಗ್ಲಿಷ್ ಶಬ್ದಗಳು ಈ ಉಡುಪನ್ನು ಧರಿಸಿ ಕನ್ನಡದೊಳಗೆ ಬಂದುಬಿಟ್ಟಿವೆ :
   (i) ಆಫ್ರಿಕನ್
   (ii) ಪರ್ಷಿಯನ್
   (iii) ಕನ್ನಡದ
   (iv) ತೆಲುಗಿನ

2. 'ಅಂಗುಲಿ ಮಾಲ' ನಾಟಕವನ್ನು ಬರೆದ ಸಾಹಿತಿಯ ಹೆಸರು :
   (i) ಡಾ. ಪ್ರಭುಶಂಕರ
   (ii) ಎಂ.ಆರ್. ಶ್ರೀನಿವಾಸ್ ಮೂರ್ತಿ
   (iii) ಕುವೆಂಪು
   (iv) ಮಾಸ್ತಿ ಅಯ್ಯಂಗಾರ್

3. 'ಇದೇಕೆ ಸುಳ್ಳು ಹೇಳುತ್ತೀರಿ ! ಈ ಇಬ್ಬರು ಮಕ್ಕಳು ದಾಖಲೆಯಲ್ಲಿಲ್ಲವಲ್ಲ' ಎಂದವರು
   (i) ಪರಂಗಿ ಟೋಪಿ ಸಾಹೇಬರು
   (ii) ವೆಂಕಣ್ಣನವರು
   (iii) ರಂಗಣ್ಣನವರು
   (iv) ವೆಂಕಟ ಸುಬ್ಬಯ್ಯನವರು

4. 1939 ನೇ ಇಸವಿಯಲ್ಲಿ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದವರು :
   (i) ಶ್ರೀ ಸೋಮಪ್ಪ
   (ii) ಎಂ. ಅಶೋಕ್
   (iii) ಎಚ್. ಸಿದ್ದಪ್ಪ
   (iv) ಎಂ. ಶೇಷಾದ್ರಿ

5. ಅಮಾತ್ಯ ರಾಕ್ಷಸನು ಚಂದ್ರಗುಪ್ತನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಈ ರಾಜನನ್ನು ಆಶ್ರಯಿಸಿದನು :

(i) ಪಶುಲೋಮನನ್ನು

(ii) ಚಂದನ ದಾಸನನ್ನು

(iii) ಸಿದ್ಧಾರ್ಥಕನನ್ನು

(iv) ಮಲಯ ಕೇತುವನ್ನು

6. ಮೃಗಾಧಿರಾಜನು ಈ ಪ್ರಾಣಿಗಳನ್ನು ಮೊದಲು ಕೊಂದು ತಿಂದಿತು :

(i) ನರಿಗಳನ್ನು

(ii) ಸಾಮಜಗಳನ್ನು

(iii) ಸಿಂಗಗಳನ್ನು

(iv) ಮೊಲಗಳನ್ನು

7. ಬೇವನ್ನು ಗುಡಪಾನದಲ್ಲಿ ಅದ್ದಿದರೆ ಅದು ಸಿಹಿಯಾಗಲಾರದು ಎಂದವರು :

(i) ಪುಲಿಗೆರೆ ಸೋಮನಾಥ

(ii) ಡಿ.ವಿ.ಜಿ.

(iii) ದ.ರಾ. ಬೇಂದ್ರೆ

(iv) ಕೆಂಪು ನಾರಾಯಣ

8. ಪಾಂಡವರು ವಿತಾಳಿಸಿದುದು :

(i) ವಿಷಾನ್ನ ತಿಂದು

(ii) ಸುರಾಪಾನ ಮಾಡಿ

(iii) ಕ್ಷೀರವನ್ನು ಕುಡಿದು

(iv) ಉತ್ತರಿಸದೆ ನೀರು ಕುಡಿದು

9. ಅಳುವ ಕಂದನ ತುಟಿ ಈ ರೀತಿ ಇದೆಯೆಂದು ಗರತಿ ಹೇಳಿದ್ದಾಳೆ :

(i) ತೊಂಡೆ ಹಣ್ಣಿನಂತೆ

(ii) ಟೊಮ್ಯಾಟೋ ಹಣ್ಣಿನಂತೆ

(iii) ಹವಳದ ಕುಡಿಯಂತೆ

(iv) ರಕ್ತದಂತೆ

10. ಶಶಿಯೊಳಗೆ ಈ ಕಳೆಯಿದೆ :

(i) ನವ

(ii) ಷೋಡಶ

(iii) ಸೂರ್ಯನ

(iv) ಮಿಂಚಿನ

11. ದುರ್ಯೋಧನನ ಪತಾಕದ ಚಿಹ್ನೆ ಇದಾಗಿತ್ತು :

(i) ತುರಗ

(ii) ಮರುಗ

(iii) ಉರಗ

(iv) ಗದಾ

12. ಕನ್ನಡನಾಡು ಪಂಪನ ಕಾಲದಲ್ಲಿ ಕಾವೇರಿಯಿಂದ ಇಲ್ಲಿಯವರೆಗೂ ಹಬ್ಬಿತ್ತು :

(i) ಕನ್ಯಾಕುಮಾರಿಯವರಿಗೆ

(ii) ಗಂಗಾನದಿಯವರಿಗೆ

(iii) ಕಾಶ್ಮೀರದವರೆಗೆ

(iv) ಗೋದಾವರಿಯವರೆಗೆ

13. ಮರ್ತ್ಯಾವಳಿಗೆ ಮಾತೆ :

(i) ಪಾರ್ವತಿ

(ii) ಗೋವು

(iii) ಭೂದೇವಿ

(iv) ಅಗಜಾತೆ

14. ವೆಂಕಟ ಸುಬ್ಬಯ್ಯನವರು ಅಲಂಕರಿಸಿದ ಹುದ್ದೆ :

(i) ಮೇಷ್ಟ್ರ

(ii) ಗುಮಾಸ್ತರ

(iii) ಸಾಹೇಬರ

(iv) ಹೆಡ್‌ಮಾಷ್ಟ್ರ

**VII.** ಕೆಳಗಿನ ಪ್ರಶ್ನೆಗಳಿಗೆ 5 – 6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *3×6=*

1. ಕನ್ನಡ ಭಾಷೆ ಹದಗೊಂಡದ್ದು ಹೇಗೆ ?

2. ಮೇಷ್ಟ್ರು ಎರಡನೆಯ ಮದುವೆಯಾಗುವುದಿಲ್ಲವೆಂದು ಏಕೆ ನಿರ್ಧರಿಸಿದರು ?

3. ಸಂದರ್ಭದೊಂದಿಗೆ ವಿವರಿಸಿ :

"ನಾಶಕ್ಯಂ ಬುದ್ಧಿಮತ: ಪುರುಷಸ್ಯ"

**ಅಥವಾ**

"ನಗ್ನ ಭಯವಾಳದಿಹ ನೆಲವುಂಟೇ ಓ ಭಿಕ್ಷು ?"

4. 'ನಿರ್ಮಲ ಚಿತ್ತವೇ ನಿಜವಾದ ಮಡಿ' — ಹೇಗೆ ? ವಿವರಿಸಿ.

5. ನಕುಲಾದಿ ಭೀಮರಿಗೆ ದುರ್ಗತಿ ಒದಗಿದ ಪ್ರಸಂಗವನ್ನು ವಿವರಿಸಿ.

6. ಸಂದರ್ಭದೊಂದಿಗೆ ವಿವರಿಸಿ :

"ನೆಲನು ಒಂದೆ, ಆಕಾಶವು ಒಂದೆ."

**ಅಥವಾ**

"ಕರಿಯಂನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್."

**II.** ಕೆಳಗಿನ ಪ್ರಶ್ನೆಗಳಿಗೆ 8 – 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *4×2=8*

1. ವಿಧಾನ ಸೌಧವು ಏಕೆ ಮತ್ತು ಹೇಗೆ ನಿರ್ಮಾಣಗೊಂಡಿತು ?

**ಅಥವಾ**

ಶಕಟದಾಸ ಮತ್ತು ಸಿದ್ಧಾರ್ಥಕರ ವಿಚಾರದಲ್ಲಿ ಅಮಾತ್ಯರಾಕ್ಷಸನಿಗೆ ಉಂಟಾದ ಗೊಂದಲವೇನು ?

2. ಹೆಣ್ಣಿಗೆ ತವರಿನ ಬಗೆಗೆ ಇರುವ ಅಭಿಮಾನವನ್ನು ವಿವರಿಸಿ.

**ಅಥವಾ**

ಶಾಸನಗಳಲ್ಲಿ ಕನ್ನಡ ನಾಡಿಸ ಸಂಸ್ಕೃತಿ ಹೇಗೆ ವ್ಯಕ್ತವಾಗಿದೆ ?